ಯನ್ನು ಕಳೆದುಕೊಂಡ ಮಕ್ಕಳ) ಸಂತೋಷಕ್ಕಾಗಿಯೋ ಎಂಬಂತೆ, ಅಥವಾ ಅವರ ಜೀವನದ ಯಾವುದೋ ರಹಸ್ಯದಿಂದ ತುಂಬಿ ಕೊಂಡಿತ್ತೋ ಎಂಬಂತೆ, ಅದು ಯಾರಿಗೂ ತಿಳಿಯದ ವಿಷಯ. ಎಲ್ಲರೂ ಹೊಟ್ಟೆಹುಣ್ಣಾಗುವಂತೆ ನಗುತ್ತಿದ್ದರು. ನೇಪಾಳಿ ಬಾಬಾ ಗಂಭೀರ ಭಾವದಿಂದ 'ಹಿಮಾಲಯದಿಂದ ಬಂದಿದ್ದೇನೆ' ಎನ್ನುತ್ತ ಎಲ್ಲರ ತಲೆಯ ಮೇಲೆ ರುದ್ರಾಕ್ಷಿಯನ್ನು ಸ್ಪರ್ಶಿಸಿ, ಎಲ್ಲರನ್ನೂ ಆಶೀರ್ವದಿಸಿದರು. ಭಕ್ತನ ೭-೮ ಮಕ್ಕಳು ಹಾಗೂ ಆಶ್ರಮದ ೭-೮ ಅನಾಥ ಬಾಲಕರು ಸಂಜೆ ಬಾಬಾರ ಸುತ್ತಲೂ ಕುಳಿತಿದ್ದರು. ಬಾಬಾ ಹಠಾತ್ತಾನೆ ಭಕ್ತನಿಗೆ, ''ನಿನಗೂ ಎಂಟು, ನನಗೂ ಎಂಟು. ಏನು ಹೇಳು ನೋಡೋಣ? ನಿನ್ನ ಒಬ್ಬ ಹುಡುಗನನ್ನು ನನಗೆ ಕೊಡು'' ಎಂದರು. ಭಕ್ತನು ಬಾಣ ತಗುಲಿದ ಜಿಂಕೆ ತನ್ನ ಮರಿಗಳತ್ತ ನೋಡುವಂತೆ ತನ್ನ ಮಕ್ಕಳ ಕಡೆಗೆ ತಿರುಗಿದರು. ಮಹಾರಾಜ್ ತಕ್ಷಣ, ''ಇರಲಿ ಬಿಡಪ್ಪ, ಅವರು ನಿನ್ನಲ್ಲೇ ಇರಲಿ'' ಎಂದರು. ನಂತರ ಹುಡುಗರತ್ತ ತಿರುಗಿ ನೋಡುತ್ತ, ''ನಿಮ್ಮಲ್ಲಿ ಯಾರಾದರೂ ಸಾಧುವಾಗುತ್ತೀರೇನು?'' ಎಂದು ಕೇಳಿದರು. ಭಕ್ತನ ಹಿರಿಯ ಮಗ ಕತ್ತಲಲ್ಲಿ ಓಡಾಡಲು ಹೆದರುತ್ತಿದ್ದ. ಅದಕ್ಕೆ ಬಾಬಾ, ''ನೀನು ಠಾಕೂರರ ಹೆಸರನ್ನು ಕೇಳಿರುವೆ. ಮತ್ತೆ ಭಯವೇಕೆ?'' ಎಂದರು. ಒಂದು ದಿನ ಬಾಬಾ ಆಶ್ರಮದ ಹುಡುಗರು ಹಾಗು ಆ ಭಕ್ತನ ಮಕ್ಕಳೊಂದಿಗೆ ಫೋಟೋ ತೆಗೆಸಿಕೊಂಡರು. ಇದು ಅವರ ಕೊನೆಯ ಫೋಟೋ ಆಗಿತ್ತು!

ಒಂದೂವರೆ ತಿಂಗಳು ಹೀಗೆ ಕಳೆದು, ಶೋಕದ ಚಿಹ್ನೆಗಳನ್ನೆಲ್ಲ ಒರೆಸಿಕೊಂಡು, ಆನಂದಭರಿತರಾಗಿ ಆ ಭಕ್ತರು ಹೊರಟುಹೋದರು.

ಆ ದಿನ ಸಂಜೆ ಬಾಬಾ ಎಲ್ಲರನ್ನೂ ಕರೆದು, '' ಪ್ರತಿದಿನ ಆರತಿಯ ನಂತರ ಎಲ್ಲರೂ ಇಲ್ಲಿಗೆ ಬನ್ನಿ. ನಾನು ಅನೇಕ ವಿಷಯಗಳನ್ನು ಹೇಳುತ್ತೇನೆ'' ಎನ್ನುತ್ತ ಹೇಳತೊಡಗಿದರು:

''ಸಾಧುಸಂಗ ಅತ್ಯಂತ ಆವಶ್ಯಕ. ನಾವೇನು ಕಡಿಮೆ ಸಾಧುಸಂಗವನ್ನು ಮಾಡಿದ್ದೇವೆಯೆ? ಎಲ್ಲಿ ಯಾವಾಗ ಅನುಕೂಲವಿತ್ತೋ ಅಲ್ಲೆಲ್ಲ ಮಾಡಿದ್ದೇವೆ. ಸಾಧುಸಂಗವಿಲ್ಲದೆ ಏನಾದರೂ ಸಾಧ್ಯವೇ? **'ತುಲಸೀಯೇ ಜಗಮೆ ಪಾಂಚೋ ರತನ್ ಹೈ ಸಾರ್। ಸಾಧು ಸಂಗ, ಹರಿಕಥಾ ದಯಾ ದೀನ ಉಪಕಾರ॥'** (ತುಲಸೀದಾಸನೆನ್ನುತ್ತಾನೆ, ಈ ಪ್ರಪಂಚದಲ್ಲಿ ಐದು ಅಮೂಲ್ಯ ರತ್ನಗಳಿವೆ: ಸಾಧುಸಂಗ, ಹರಿಯ ಗುಣಗಾನ, ದಯೆ, ದೈನ್ಯತೆ ಹಾಗೂ ಪರೋಪಕಾರ) ಸ್ವಾಮೀಜಿ ಹೇಳುತ್ತಿದ್ದರು, 'ಸಾಧುಸಂಗದಿಂದಲೇ ಮೊದಲು ಧರ್ಮಭಾವ ನಮ್ಮಲ್ಲಿ ಜಾಗೃತವಾಗುವುದು. ಸಂಸಾರದಲ್ಲಿ ಸುಖಭೋಗ, ವಾಸನೆಗಳ ರಸದಲ್ಲಿ ಎಲ್ಲರೂ ನೆನೆದುಹೋಗಿದ್ದಾರೆ. ಅದು ಉರಿದು ಹೋಗುವುದಾದರೂ ಹೇಗೆ? ಆ ವಾಸನೆಗಳು ಒಣಗಲು ಮೊದಲು ತುಸು ಶಾಖ ಅಗತ್ಯ. ಆದರೆ ಚಕಮಕಿ ಕಲ್ಲಾದರೆ ಬೇರೆಮಾತು. ಸಾವಿರ ವರ್ಷ ನೀರಿನಲ್ಲಿದ್ದರೂ ಅದನ್ನೆತ್ತಿ ತಿಕ್ಕಿದರೆ, ತಕ್ಷಣವೇ ಬೆಂಕಿ ಉರಿಯುತ್ತದೆ. ಆದರೆ ಅಂಥವರು ಎಲ್ಲಿದ್ದಾರೆ? ಎಷ್ಟು ಮಂದಿ ಇದ್ದಾರೆ?' ಅಂತ.''

ಕೆಲವು ಕ್ಷಣ ಸುಮ್ಮನಿದ್ದು ಬಾಬಾ ಮತ್ತೆ ಹೇಳತೊಡಗಿದರು: ''ನೋಡು, ಮಹತ್ಕಾರ್ಯಗಳೆಲ್ಲವೂ ತ್ಯಾಗವನ್ನೇ ಅವಲಂಬಿಸಿವೆ. ನಾನೆಂದಿಗೂ ಬಹರಂಪುರಕ್ಕೆ ಹೋಗಿ ನಾಲ್ಕಾಣೆಗೆ ತಿಂಡಿ ಖರೀದಿಸಿ ತಿಂದಿಲ್ಲ. ಹೆಚ್ಚೆಂದರೆ ಎಳನೀರು ಕುಡಿದು, ಗಾಡಿಯವನಿಗೆ ಊಟ ಮಾಡಿಸಿ, ತಡವಾಗಿ ಬಂದು ಮಧ್ಯಾಹ್ನ ಊಟ ಮಾಡುತ್ತಿದ್ದೆ. ಅಲ್ಲಿ ಐದು ಬಗೆಯ ಪದಾರ್ಥಗಳಿಂದ ಅಡುಗೆ ಮಾಡುವರೆಂದು ಮೊದಲೇ ಹೇಳಿಬಿಡುತ್ತಿದ್ದೆ, 'ಬರೀ ಅನ್ನ ಮಾತ್ರ ಸಾಕು; ಇದಕ್ಕಿಂತ ಹೆಚ್ಚು ಮಾಡಿದರೆ ಇನ್ನು ಮೇಲೆ ಬರಲಾರೆ' ಅಂತ. ಇಷ್ಟವಿಲ್ಲದಿದ್ದರೂ ಅವರು ಈ ನಿಬಂಧನೆಗೆ ಒಳಗಾಗಿ ಹಾಗೇ ಮಾಡುತ್ತಿದ್ದರು. ಎಷ್ಟೋ ಸಲ ಅವರು, 'ಇದು ಸರಿಯಲ್ಲ , ಒಂದು ದಿನ ನಮ್ಮ ಇಚ್ಛೆಗೆ ಅನುಗುಣವಾಗಿ ನೀವು ಊಟ ಮಾಡಬೇಕು' ಎನ್ನುತ್ತಿದ್ದರು. ನಾನೆಂದೂ ಆಶ್ರಮದ ಹಣದಿಂದ ನನಗಾಗಿ ಬಟ್ಟೆಯನ್ನು ಕೊಂಡುಕೊಳ್ಳುತ್ತಿರಲಿಲ್ಲ. ಮಹಾರಾಜ್ (ಸ್ವಾಮಿ ಬ್ರಹ್ಮಾನಂದರು) ನನಗಾಗಿ ಕಳುಹಿಸಿ ಕೊಡುತ್ತಿದ್ದರು. ಅನಂತರ ಬಹಳ ಬದಲಾವಣೆಗಳಾಗಿವೆ. ಎಂದೂ ನಾನು ಒಳ್ಳೆಯ ಹಾಸಿಗೆಯ ಮೇಲೆ ಮಲಗಿಲ್ಲ. ಮಂಡಿಗೆ ಮಂಡಿ ತಿಕ್ಕಿದಾಗ ಕಷ್ಟವೆನಿಸುತ್ತಿತ್ತು. ದಿಂಬೊಂದು ಬೇಕಾಗುತ್ತಿತ್ತು. ಅದೂ ಇದ್ದರೆ ಇತ್ತು, ಇಲ್ಲದಿದ್ದರೆ ಇಲ್ಲ. ದಿಂಬಿಗೂ ಚೀಲವಿರಲಿಲ್ಲ. ಒಂದು ಹಳೆಯ ಬಟ್ಟೆ ಸುತ್ತಲಾಗಿತ್ತು, ಅದೂ ಹರಿದಲ್ಲಿ ಗಂಟು ಹಾಕಿರುತ್ತಿತ್ತು. ನಾನು ಎಲ್ಲರಿಗೂ ಉಣಿಸಿದ್ದೇನೆ, ಉಡಿಸಿದ್ದೇನೆ. ಎಲ್ಲರನ್ನೂ ಸಾಧ್ಯವಾದಷ್ಟು ಮಟ್ಟಿಗೆ ಸುಖವಾಗಿಡಲು ಪ್ರಯತ್ನಿಸಿದ್ದೇನೆ. ಈಗಿನ ಈ ಕೋಣೆ, ಮಂಚ, ಹಾಸಿಗೆ, ದಿಂಬು, ಅಂಗಿ ಇವನ್ನೆಲ್ಲ ನೋಡಿದರೆ ಅದೊಂದೂ ಅರ್ಥವಾಗದು.

''ನೋಡು, ಮ- ಬಹರಂಪುರದಲ್ಲಿ ಆಶ್ರಮಕ್ಕಾಗಿ ಅಕ್ಕಿ ಸಂಗ್ರಹಿಸುತ್ತಿದ್ದ. ಬೆಳಗ್ಗೆ ಸ್ವಲ್ಪ ಕಡಲೆಪುರಿ ತಿಂದು, ಸಂಜೆಯವರೆಗೆ ಅದರಲ್ಲೇ ಇರುತ್ತಿದ್ದ. ಸಂಜೆ ಒಲೆಯ ಹೊಗೆಗೆ ಕಣ್ಣಲ್ಲಿ, ಮೂಗಿನಲ್ಲಿ ನೀರು ಸುರಿಸುತ್ತಾ, ಭಿಕ್ಷೆಯ ಅಕ್ಕಿಯೊಂದಿಗೆ ಒಂದು ಆಲೂಗಡ್ಡೆ ಬೇಯಿಸಿ ತಿನ್ನುತ್ತಿದ್ದ. ಅವನ ಕಷ್ಟವನ್ನು ನೋಡಿದ ಕಾಲೇಜಿನ ಹುಡುಗರು, 'ನಾವು ಅನ್ನ ಸಂಗ್ರಹಿಸುತ್ತೇವೆ, ಎಲ್ಲ ವ್ಯವಸ್ಥೆ ಮಾಡುತ್ತೇವೆ. ನೀವು ನಮಗೆ ಪಾತ್ರೆ ಕೊಟ್ಟು ಹೋಗಿ' ಎನ್ನುತ್ತಿದ್ದರು. ನೋಡು, ಇಂಥ ತ್ಯಾಗವನ್ನು ನೋಡಿ ಅವರೂ ಸ್ಫೂರ್ತಿಪಡೆದು ಆ ರೀತಿ ಮುಂದುವರೆದರು.

''ಪುರಿಯಲ್ಲಿ ನನಗೆ ಮಾತೆ ಲಕ್ಷ್ಮಿಯ ವಿಶೇಷ ದರ್ಶನವುಂಟಾಯಿತು. ನಾನಾಬಗೆಯ ವೈಭೋಗಗಳೊಂದಿಗೆ ಆಕೆಯನ್ನು ಕಂಡೆ. ಇದರ ಬಗ್ಗೆ ಮಹಾರಾಜ್ ಅವರಿಗೆ (ಸ್ವಾಮಿ ಬ್ರಹ್ಮಾನಂದರು) ಹೇಳಿದಾಗ ಅವರು, 'ನಿನಗಿನ್ನು ಚಿಂತೆಯಿಲ್ಲ. ತಾಯಿ ಲಕ್ಷ್ಮಿಯ ಕೃಪೆಯಿಂದ ಆಶ್ರಮಕ್ಕೆ ಇನ್ನು ಯಾವ ಕೊರತೆಯೂ ಇರಲಾರದು' ಎಂದರು. ನಿಜ, ಅಂದಿನಿಂದ ಎಂದಿಗೂ, ಯಾವುದರ ಕೊರತೆಯೂ ಇಲ್ಲಿ ಉಂಟಾಗಿಲ್ಲ, ಬೇಕಾದಾಗ ಬೇಕಾದದ್ದು ಒದಗಿದೆ.''

*(ಮುಂದುವರಿಯುವುದು)*

# ಶಿಕ್ಷಣ ಮತ್ತು ನೈತಿಕತೆ



**ಡಾ. ಹೆಚ್. ಪಾಂಡುರಂಗ ವಿಠಲ**

ಆಧುನಿಕ ಭಾರತದಲ್ಲಿ ಸಾರ್ವಜನಿಕ ಶಿಕ್ಷಣದಲ್ಲಿ ನೈತಿಕ ಮೌಲ್ಯಗಳ ಅಳವಡಿಕೆಯನ್ನು ಕುರಿತು ಗಂಭೀರವಾಗಿ ಚಿಂತಿಸಿ, ಸರಿಯಾದ ಶಿಕ್ಷಣ ನೀತಿಯನ್ನು ರೂಪಿಸುವ ಕಾರ್ಯ ಅತ್ಯಂತ ತುರ್ತಾಗಿ ಆಗಬೇಕಾಗಿದೆ. ಈ ಕುರಿತು ಈ ಲೇಖನವನ್ನು ಬರೆದಿರುವ ಲೇಖಕರು ಕನ್ನಡ ಪ್ರಾಧ್ಯಾಪಕರು ಹಾಗೂ ಆಶ್ರಮದ ಭಕ್ತರು.

'ಶಿಕ್ಷಣ ತನ್ನ ಕಾಲಿನ ಮೇಲೆ ತಾನು ನಿಂತು ಜೀವನ ಸಂಗ್ರಾಮವನ್ನು ಎದುರಿಸುವ ಸಾಮರ್ಥ್ಯವನ್ನು ನೀಡಬೇಕು, ಮನುಷ್ಯನ ಒಳಗಿಂದ ಚಾರಿತ್ರ್ಯಬಲ, ಪರಸೇವಾತತ್ಪರತೆ, ಸಿಂಹಸದೃಶ ಸಾಹಸಗಳನ್ನು ಹೊರತರಬೇಕು. ಅದು ಒಂದಿನಿತೂ ಜೀರ್ಣವಾಗದೆ ದಿಕ್ಕುಗೆಟ್ಟು ಓಡುತ್ತಿರುವ ತಲೆಯಲ್ಲಿ ತುಂಬಿಕೊಂಡ ವಿಷಯಗಳ ಮೊತ್ತವಲ್ಲ. ಕೇವಲ ಐದು ವಿಷಯಗಳನ್ನು ತಿಳಿದುಕೊಂಡು, ಅವನ್ನು ನಿಮ್ಮ ಜೀವನದಲ್ಲಿ, ನಿಮ್ಮ ಶೀಲದಲ್ಲಿ ಅನುಷ್ಠಾನಕ್ಕೆ ತಂದರೆ ಇಡಿಯ ಪುಸ್ತಕ ಭಂಡಾರವನ್ನೇ ಕಂಠಪಾಠ ಮಾಡಿದವನಿಗಿಂತ ಹೆಚ್ಚು ವಿದ್ಯೆ ನಿಮ್ಮಲ್ಲಿದ್ದಂತಾಗುವುದು. ವಿದ್ಯಾಭ್ಯಾಸವೆಂದರೆ ಮನುಷ್ಯನಲ್ಲಿ ಈಗಾಗಲೇ ಸುಪ್ತವಾಗಿರುವ ಪರಿಪೂರ್ಣತೆಯನ್ನು ಹೊರತರುವುದು. ಮಗುವು ತನಗೆ ತಾನೇ ಶಿಕ್ಷಣ ನೀಡಿಕೊಳ್ಳುತ್ತದೆ. ತನ್ನ ಸ್ವಭಾವಕ್ಕೆ ಅನುಗುಣವಾಗಿ ಬೆಳೆಯಲು ನೀವು ಅಡ್ಡಿ ಆತಂಕಗಳನ್ನು ನಿವಾರಿಸಿ ಸಹಾಯ ಮಾಡಬಹುದು ಅಷ್ಟೆ' ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಶಿಕ್ಷಣ ನಮ್ಮನ್ನು ಸ್ವಾವಲಂಬಿಯಾಗಿಸಬೇಕು.

ವಿದ್ಯಾಭ್ಯಾಸದ ಜೀವಾಳವೇ ಧರ್ಮ. ತಾವು ಬದುಕಿರುವುದೇ ಧನ್ಯತೆ ಎಂದು ಅನ್ನಿಸುವಂತೆ ಮಕ್ಕಳಿಗೆ ಚಿಕ್ಕಂದಿನಿಂದಲೇ ಜೀವನದ ಬಗ್ಗೆ ಪವಿತ್ರ ಭಾವನೆಯನ್ನು ಮೂಡಿಸಬೇಕು. ಒಳ್ಳೆಯ ಕೆಲಸದಿಂದ ಸುಪ್ತ ದೈವಿಕತೆಯ ಆವಿರ್ಭಾವವಾಗುತ್ತದೆ, ವಿದ್ಯೆಯ ಎಲ್ಲ ಭಾಗಗಳೂ ದಿವ್ಯಜೀವನದ ಅಂಗಗಳೇ ಎಂದು ತಿಳಿಸಬೇಕು. ಪುರುಷಸಿಂಹರನ್ನಾಗಿಸುವ ವಿದ್ಯಾಭ್ಯಾಸದ ಮೂಲಭೂತ ಕಾರ್ಯವೇ ಶೀಲ ನಿರ್ಮಾಣ; ಆಗಮಾತ್ರವೇ ನಂಬಿಕೆ ಮತ್ತು ಶ್ರದ್ಧೆ ಬರುವುದು. ಶಿಕ್ಷಣದ ಬಗೆಗೆ ವಿವೇಕಾನಂದರು ಹೇಳುವ ಇನ್ನೊಂದು ಮುಖ್ಯ ಅಂಶ ಏಕಾಗ್ರತೆ, ಬರಿಯ ವಿಷಯಸಂಗ್ರಹವಲ್ಲ. ಇದು ಜ್ಞಾನಾರ್ಜನೆಗೆ ಇರುವ ಏಕಮಾತ್ರ ಮಾರ್ಗ. 'ಪುನಃ ವಿದ್ಯಾಭ್ಯಾಸ ಪ್ರಾರಂಭಿಸುವಂತಿದ್ದರೆ ನಾನು ಮೊದಲು ಮನಸ್ಸನ್ನು ಏಕಾಗ್ರಗೊಳಿಸುವುದು ಹೇಗೆ ಮತ್ತು ಅದನ್ನು ಹೇಗೆ ಹಿಂದಕ್ಕೆ ಸೆಳೆಯುವುದು ಎಂಬುದನ್ನು ಕಲಿತುಕೊಂಡು, ಅನಂತರ ಅಂತಹ ಒಂದು ಸರಿಯಾದ ಉಪಕರಣದಿಂದ ನನ್ನ ಇಚ್ಛಾಪ್ರಕಾರ ವಿಷಯಗಳನ್ನು ಸಂಗ್ರಹಿಸುತ್ತೇನೆ' ಎನ್ನುತ್ತಾರೆ ಅವರು. ಪಾರಮಾರ್ಥಿಕ ಮತ್ತು ಲೌಕಿಕ ಶಿಕ್ಷಣಗಳೆರಡೂ ನಮ್ಮ ಅಧೀನದಲ್ಲಿರಬೇಕು, ಅವು ರಾಷ್ಟ್ರೀಯ ಸ್ವರೂಪವನ್ನು ಪಡೆದಿರಬೇಕು ಎಂಬುದು ವಿವೇಕಾನಂದರ ಆಸೆ.

ಆದರೆ ವಿವೇಕಾನಂದರ ಶಿಕ್ಷಣದ ಕಲ್ಪನೆ ನಮ್ಮ ದೇಶದಲ್ಲಿ ಜಾರಿಗೆ ಬರಲಿಲ್ಲ. ಕಾರಣ, ವಿದ್ಯಾಭ್ಯಾಸವನ್ನು ಕಡೆಗಣಿಸಲಾಗಿದೆ. ಶಿಕ್ಷಕ ಸಮುದಾಯಕ್ಕೆ ಭಾರತದ ಆಧ್ಯಾತ್ಮಿಕ ಪರಂಪರೆಯ ಬಗ್ಗೆ ಉಪೇಕ್ಷೆ. ಜನತೆಗೆ ನಿಜವಾದ ವಿದ್ಯೆಯ ಶಕ್ತಿಯ ಅರಿವಾಗಿಲ್ಲ – ಒಳ್ಳೆಯ ಇಂಗ್ಲಿಷ್ ಶಾಲೆಗೆ ಸೇರಿಸಿದರೆ ಪವಾಡ ನಡೆದು ತಮ್ಮ ಮಕ್ಕಳು ರಾಶಿ ಹಣ ಸಂಪಾದಿಸುತ್ತಾರೆ ಎಂಬ ಭ್ರಮೆ. ಸಹಮಾನವರ ಬಗ್ಗೆ, ಪರಿಸರದ ಬಗ್ಗೆ ಸ್ವಲ್ಪವೂ ಕಾಳಜಿ, ಜವಾಬ್ದಾರಿ ಇಲ್ಲದ ತಾಂತ್ರಿಕ ಪರಿಣತಿ ಪಡೆದ ಶಿಕ್ಷಿತರನ್ನು ತಯಾರು ಮಾಡಿದರೆ ಸಾಲದು; ಅವರು ಹೃದಯವಂತರೂ ಆಗಿರಬೇಕು ಎಂಬ ಹಂಬಲದಿಂದ ನೈತಿಕ ಆಧ್ಯಾತ್ಮಿಕ ಮೌಲ್ಯಗಳ ಶಿಕ್ಷಣವನ್ನು ಸೇರಿಸುವ ಪ್ರಯತ್ನ ಮಾಡಿದರು. ಧರ್ಮ ನಿರಪೇಕ್ಷ ವಾತಾವರಣದಲ್ಲಿ ಇದು ಪ್ರಾಯೋಗಿಕವಾಗದೆ ಹೋಯಿತು.

ಇದಕ್ಕೆ ಕಾರಣ, ಮಕ್ಕಳು ಶಿಕ್ಷಕನನ್ನು ನೋಡಿ ಮೌಲ್ಯಗಳನ್ನು ಕಲಿಯುತ್ತವೆಯೆ ಹೊರತು ಆತ ಹೇಳಿದ್ದನ್ನು ಕೇಳಿಸಿಕೊಂಡು ಕಲಿಯುವುದಿಲ್ಲ. ಶ್ರೀರಾಮಕೃಷ್ಣರು ಹೇಳಿದ ಕತೆ ನೆನಪಿಸಿಕೊಳ್ಳಿ. ಜೋನಿ ಬೆಲ್ಲದ ಗುಡಾಣವನ್ನು ಬಳಿ ಇಟ್ಟುಕೊಂಡ ವೈದ್ಯನು ಬೆಲ್ಲ ತಿನ್ನಬೇಡ ಎಂದು ರೋಗಿಗೆ ಹೇಳಿದರೆ ಪ್ರಯೋಜನವಾಗದು. ಶಿಕ್ಷಣದ ವ್ಯವಸ್ಥೆಯಲ್ಲಿ ಸ್ಪರ್ಧೆಗೆ ಅವಕಾಶವೇ ವಿನಾ ಶ್ರದ್ಧೆಗೆ ಇಲ್ಲ. ಆದರೂ ಶಿಕ್ಷಕ ಜಾಗೃತನಾಗಿದ್ದರೆ ಆಟದ ಬಯಲಿನಲ್ಲಿ, ವಿದ್ಯಾರ್ಥಿಗಳ ಒಡನಾಟದಲ್ಲಿ ನೈತಿಕತೆಯನ್ನು ಒರೆಗೆ ಹಚ್ಚುವ ಪ್ರಸಂಗಗಳು ಬಂದೇ ಬರುತ್ತವೆ – ಅವನ್ನು ಬಳಸಿಕೊಳ್ಳಬಹುದು.

ಇನ್ನೊಂದು ಕಾರಣ, ಬುದ್ಧಿವಾದವನ್ನು ಯಾರೂ ಕೇಳಲು ಬಯಸುವುದಿಲ್ಲ ಎಂಬುದು. ಯುದ್ಧದ ಮೊದಲು ಸಂಜಯನ ದೌತ್ಯದ ಬಳಿಕ ಪಾಂಡವರ ಸಿದ್ಧತೆಗಳ ವಿವರವನ್ನು ಕೇಳಿ ಧೃತರಾಷ್ಟ್ರ ತೀರ ತಲ್ಲಣಕ್ಕೆ ಒಳಗಾಗುತ್ತಾನೆ. ವಿದುರನ ಬುದ್ಧಿವಾದ ನಾಟದೆ

ಇದ್ದಾಗ ಸನತ್ಸುಜಾತನನ್ನು ಬರಮಾಡುತ್ತಾನೆ. ಋಷಿಯ ಎಲ್ಲ ನೀತಿಗಳನ್ನು ಕೇಳಿದ ಧೃತರಾಷ್ಟ್ರ ತಲೆದೂಗುತ್ತಾನೆ, ಅಳವಡಿಸಿಕೊಳ್ಳಲು ಆಗದು. ಸ್ವಲ್ಪ ಹೊತ್ತಿನ ಅನಂತರ ಪಾಂಡವರು ಏಕೆ ಸಾಯುವುದಿಲ್ಲ ಎಂದೇ ಅವನಿಗೆ ಅನ್ನಿಸುತ್ತದೆ!

ವಿದ್ಯೆ ಹೊಟ್ಟೆಪಾಡಿಗೆ. ಮೆಕಾಲೆಯಿಂದಾಗಿ ಎಲ್ಲರೂ ಅಕ್ಷರಸ್ಥರಾಗುವುದು ಗುರಿ. ಪದವಿ, ಸ್ನಾತಕೋತ್ತರ ಪದವಿ ಇದ್ದಲ್ಲಿ ಜೀವನ ಮಾಡುವುದಕ್ಕೆ ಭಯವಿಲ್ಲ , ಇಲ್ಲದಿದ್ದರೆ ಕರಾಳ ಅಂದುಕೊಂಡಿದ್ದೇವೆ. ಮಗುವಿನ ಗ್ರಹಣಶಕ್ತಿ ಪರೀಕ್ಷಿಸಿ ಯಾವುದರಲ್ಲಿ ಮುಂದುವರಿಯಬಹುದು ಎಂದು ನೋಡುತ್ತಿಲ್ಲ. ಅಂತಸ್ತು ಕಾಪಾಡಿಕೊಳ್ಳಲು ಐಷಾರಾಮಿ ಶಾಲೆಗೆ ಕಳಿಸುತ್ತಾರೆ. ಪಠ್ಯಕ್ರಮ ಎಲ್ಲರಿಗೂ ಒಂದೇ. ಅದರಲ್ಲೂ ಮೆಥೆಡಾಲಜಿಗೇ ಗಮನ. ಮಗುವಿಗೆ ಎಷ್ಟು ತಲುಪಿತು ನೋಡುವುದಿಲ್ಲ. ರೈತನ ಮಕ್ಕಳಿಗೆ ಬೆಳೆ ಬೆಳೆದು ವಿಲೇವಾರಿ ಆಗುವ ಹಂತಗಳು ಗೊತ್ತಿಲ್ಲ; ಕೂಲಿಗಳಿಗೆ ಗೊತ್ತಿದೆ. ಏಕೆಂದರೆ, ತಮ್ಮ ಹಾಗೆ ಕೀಳಾಗದಿರಲಿ, ಮಕ್ಕಳ ಜೀವನ ಉತ್ತಮವಾಗಲಿ ಎಂಬ ಭಾವನೆ! ವೃತ್ತಿ ಅಳವಡಿಸಿಕೊಳ್ಳುವುದರಲ್ಲಿ ತರತಮ ಭಾವ.

ಇಂತಹ ಶಿಕ್ಷಣದಿಂದ ‘ಉದ್ಯೋಗ ಎಂಬುದು ಪ್ರೀತಿಯಿಂದ ಮಾಡುವ ಕಾಯಕ’ ಎಂಬ ಭಾವನೆ ಹೋಗಿದೆ. ಮುಂದಿನ ಜನಾಂಗಕ್ಕೆ ಏನನ್ನಾದರೂ ಮಾಡುತ್ತಿದ್ದೇವೆ ಎಂಬ ಉನ್ನತ ಭಾವ ಹೋಗಲಿ, ಆತ್ಮಸಂತೋಷ ಕೂಡ ಗುರಿ ಆಗುತ್ತಿಲ್ಲ. ಗಳಿಸುವ ದುಡ್ಡಿನ ಕಡೆಗೆ ಮಾತ್ರ ಗಮನವಾಗಿರುವುದರಿಂದ ಮಾನಸಿಕವಾಗಿ ಬೆಳವಣಿಗೆ ಇಲ್ಲ. ಮೌಲ್ಯಗಳು ಇಲ್ಲದ ಶಿಕ್ಷಣದಿಂದಾಗಿ ವಿಷಯಗಳನ್ನು ಗ್ರಹಿಸಿದರೂ, ತಾವು ಯಾರು ಎಂಬುದನ್ನೇ ವಿದ್ಯಾರ್ಥಿಗಳು ಮರೆಯುತ್ತಿದ್ದಾರೆ. ಅವರು ವ್ಯಕ್ತಿತ್ವ ಬೆಳೆಸಿಕೊಳ್ಳುತ್ತಿಲ್ಲ. ಇಲ್ಲಿ ಶಿಕ್ಷಣ ಸೋತಿತು. ಇದರ ಫಲ ಉಣ್ಣುತ್ತಿರುವವರು ತಂದೆ ತಾಯಿಯರು. ಅವರ ಬಗ್ಗೆ ಸಹಿಷ್ಣುತೆ ಕಡಿಮೆ ಆಗಿದೆ. ಎಷ್ಟೋ ಮನೆಗಳಲ್ಲಿ ಹಿರಿಯರು ಮಕ್ಕಳ ನಡುವೆ ಸಂವಹನ ಇಲ್ಲ. ೧೯೮೫ರಲ್ಲಿ ಲಕ್ಷ ಜನಸಂಖ್ಯೆಗೆ ೮ ರಿಂದ ೧೦ ವೃದ್ಧಾಶ್ರಮಗಳಿದ್ದುದು ಈಗ ಅತಿ ಹೆಚ್ಚಾಗಿ, ವ್ಯಾಪಾರೀಕರಣವೂ ಆಗಿದೆ. ತಂದೆ ತಾಯಿ ಅಮೂರ್ತ ಭಾವಗಳನ್ನು ಬೆಳೆಸುತ್ತಿಲ್ಲ. ಜಾಗತೀಕರಣ, ಉದಾರೀಕರಣ ದಿಂದಾಗಿ ಬಳಸು–ಬಿಸಾಕು ಸಂಸ್ಕೃತಿ ಬೆಳೆಯಿತು. ಮಕ್ಕಳು ಇದನ್ನು ಶಿಕ್ಷಣದಲ್ಲಿ ಅಳವಡಿಸಿಕೊಂಡರು. ಪಶ್ಚಿಮದಂತೆ ಇಲ್ಲೂ ಯೌವನವೇ ಆದರ್ಶವಾಗಿ, ವೃದ್ಧರು ತಿರಸ್ಕಾರಕ್ಕೆ ಒಳಗಾದರು.

ಶಿಕ್ಷಣದಿಂದ ಆರೋಗ್ಯಕರ ಸಮಾಜ ನಿರ್ಮಾಣ ಎನ್ನುವ ಗುರಿ ಹೊರಟೇ ಹೋಗಿದೆ. ಇತರರ ಬಗ್ಗೆ ಸೌಹಾರ್ದತೆ, ಹೊಂದಾಣಿಕೆಯ ಬದಲು ಸ್ಪರ್ಧೆಯನ್ನು ಉತ್ತೇಜಿಸಿ, ಮಕ್ಕಳಲ್ಲಿ ಸ್ವಾಭಾವಿಕವಾಗಿ ಇರುವ ಉದಾರ ಮನಸ್ಸು ಹಾಳಾಗಿ, ಯಾಂತ್ರಿಕತೆ ತಲೆ ಎತ್ತಿತು. ಜವಾಬ್ದಾರಿ ಬಾರದಿರಲಿ ಎಂಬಂತೆ ಮನೆಯಲ್ಲಿ ನಡೆದುಕೊಳ್ಳುವುದು, ಸಲಹೆ, ಬುದ್ಧಿವಾದಗಳಿಗೆ ಆಸ್ಪದ ನೀಡದಿರುವುದು ಮೊದಲಾಯಿತು. ಹಿಂದೆ ಹಿರಿಯರು ಆಕರ್ಷಣೆ ಎಂದರೇನು, ಬೇಕಾದದ್ದು – ಬೇಡವಾದದ್ದು ಯಾವುದು ಎಂದು ತರಬೇತಿ ನೀಡುತ್ತಿದ್ದರು. ಒಡಹುಟ್ಟಿದವರ ಸಂಖ್ಯೆ ಹೆಚ್ಚಿದ್ದಾಗ ಸ್ವಾರ್ಥ ಕಡಿಮೆ ಆಗುತ್ತಿತ್ತು, ನೋವು ಕೊಡುವವರ ಸಂಖ್ಯೆಯೂ ಕಡಿಮೆ ಇತ್ತು. ಈಗ? ಕರೆದರೆ ಕೊಟ್ಟರೆ ಮಕ್ಕಳು ಸಹಿಸುವುದಿಲ್ಲ.

ಶಿಕ್ಷಣ ಎಲ್ಲ ದೃಶ್ಯಮಾಧ್ಯಮಕ್ಕೆ ಬಂದುದು ದುರಂತ. ಸ್ಮಾರ್ಟ್ ಕ್ಲಾಸುಗಳಿಂದ ಕಲ್ಪನಾಶಕ್ತಿ ಕುಂಠಿತವಾಯಿತು. ಕೆಲವಾದರೂ ಅಮೂರ್ತ ರೂಪದಲ್ಲಿ ಇರಬೇಕಿತ್ತು. ಎಲ್ಲವೂ ಸುಲಭದಲ್ಲಿ ಸಿಗುತ್ತದೆ, ಎನ್ನುವ ಭಾವನೆ ಬಂತು. ಹಿಂದೆ ಇದ್ದ ಶಿಕ್ಷಣದ ಕಲ್ಪನೆಯಿಂದ ನಾವು ಬಹುದೂರ ಬಂದಿದ್ದೇವೆ. ಪಾಸಾಗುವುದು ಬಹು ಸುಲಭವಾದ್ದರಿಂದ, ಗುರುಗಳ ಬಗ್ಗೆ ಆಗಲಿ ತರಗತಿಯ ಬಗ್ಗೆ ಆಗಲಿ ಗೌರವ ಆದರಗಳಿಲ್ಲ. ಈಗ ಪದವಿ ಪಡೆದರೆ ಜೀವನ ಸಾರ್ಥಕ ಎನ್ನಿಸದು – ಬೇರೆ ವಿಚಾರ ಕಲಿತರೆ ಸಾರ್ಥಕ. ಶಿಕ್ಷಣದಿಂದಲೇ ಸ್ವಾರ್ಥ ಹೆಚ್ಚಾಗುತ್ತಿದೆ ಈ ಕಾಲದಲ್ಲಿ. ಚಿಕ್ಕ ಮಗು ನನ್ನೊಬ್ಬಳಿಗೇ ಬರೆಸಿಬಿಡಿ ಅಂತ ಕೇಳುತ್ತೆ! ಆದ್ದರಿಂದಲೇ ಟ್ಯೂಷನ್ ಮಳಿಗೆಗಳು ಹೆಚ್ಚಾಗುತ್ತ, ಶಿಕ್ಷಣ ವ್ಯಾಪಾರವಾಗಿದೆ.

ಹಾಗಾದರೆ ನೈತಿಕತೆಯನ್ನು ಮಕ್ಕಳಲ್ಲಿ ಕಲಿಸುವುದೆಂತು? ಸುಸ್ಥಿರ ಸಮಾಜದ ಬೇರುಗಳು ತಮಗಿಂತ ದೊಡ್ಡದಿದೆ ಎಂದು ಅದಕ್ಕೆ ತಲೆಬಾಗುವ ಧರ್ಮ ಅವರಲ್ಲಿ ಬರಬೇಕು. ನಮ್ಮ ವರ್ತನೆ, ಕ್ರಿಯೆಗಳು ಬೌದ್ಧಿಕ ಚಿಂತನೆಗಳಿಂದ ಉಂಟಾಗುವುದಿಲ್ಲ, ಸುಪ್ತ ಮನಸ್ಸಿನ ನಿರ್ದೇಶನದ ಮೇರೆಗೆ ನಡೆಯುವುವು ಎಂದು ತಿಳಿದು, ಕಂದಾಚಾರ ಎಂದು ತಿರಸ್ಕರಿಸಿದ, ಮನುಷ್ಯ ಸಂಬಂಧಗಳನ್ನು ಕಟ್ಟಿಕೊಡುವ ಸಾಂಪ್ರದಾಯಿಕ ಆಚರಣೆಗಳನ್ನು ಪಾಲಿಸುತ್ತ, ಸಮಾಜದೊಂದಿಗೆ ಒಂದಾಗುವುದು ಮುಖ್ಯ. ಇದಕ್ಕೆ ಬುನಾದಿ ಹಾಕುವವರು ತಂದೆತಾಯಿಯರೇ. ಚಿಕ್ಕ ವಯಸ್ಸಿನಲ್ಲಿ ಮಗುವಿಗೆ ಭಾಷೆಯನ್ನು ಹೇಳಿ ಕೊಟ್ಟಂತೆಯೇ ನಮ್ಮ ಸಂಸ್ಕೃತಿ, ಸಂಪ್ರದಾಯಗಳನ್ನು ಅದು ಆಚರಿಸುವಂತೆ ಮಾಡಬೇಕು. ಮಗುವಿಗೆ ಐದು ತುಂಬುವುದರೊಳಗೇ ಅದರ ವ್ಯಕ್ತಿತ್ವದ ಸೇಕಡಾ ೬೫ರಷ್ಟು ರೂಪುಗೊಂಡಿರುತ್ತದೆ. ದೇವರು ಧರ್ಮದ ಬಗ್ಗೆ ತನ್ನ ತಾಯಿ ತಂದೆಯರು ಹೇಳಿದ ಅಂಶಗಳು ಅರಿವಿಲ್ಲದೆಯೆ ಅದರ ಆಳಮನಸ್ಸಿನಲ್ಲಿ ದಾಖಲಾಗುತ್ತವೆ. ಮುಂದೆ ಅದರ ವರ್ತನೆಯನ್ನು ನಿರ್ಧರಿಸುವ ಹೆಚ್ಚಿನ ಕಂಡೀಷನಿಂಗ್ ಆಗುವುದು ಈಗಲೇ. ಭಾವಪರಿವರ್ತನೆ ಎಂದೂ ತಾರ್ಕಿಕವಲ್ಲ. ಮಹಾಪುರುಷರೆಲ್ಲ ತಮ್ಮನ್ನು ರೂಪಿಸಿದವರು ತಾಯಂದಿರು ಎನ್ನುತ್ತಾರೆ. ದಿವಂಗತ ಕಲಾಂ ಅವರಲ್ಲಿ ಧಾರ್ಮಿಕ ಶ್ರದ್ಧೆ ಬೆಳೆಸಲು ಅವರ ತಂದೆ ಚಿಕ್ಕಂದಿನಿಂದಲೇ ಗಮನ ಕೊಟ್ಟಿದ್ದರು. ಸಂಜೆ ಶಾಲೆ ಮುಗಿದ ನಂತರ ಸ್ವಲ್ಪ ಹೊತ್ತು ಪತ್ರಿಕೆ ಚಂದಾ ವಸೂಲಿಗೆ ಹೋಗಿ, ನಂತರ ತಂದೆಯೊಡನೆ ನಮಾಜ್ ಮಾಡಲು ತೆರಳುತ್ತಿದ್ದರು. ತಾಯಿಯೂ ಅಷ್ಟೆ. ಮಗನಿಗೆ ಧಾರ್ಮಿಕ ವಿಷಯಗಳನ್ನು ಮನದಟ್ಟು ಮಾಡಿಸುತ್ತಿದ್ದರು. ಪರಿಣಾಮ ಕಲಾಂಗೆ ಚಿಕ್ಕ ವಯಸ್ಸಿನಲ್ಲೇ

ಉತ್ತಮ ನಡವಳಿಕೆ, ಕಾರ್ಯಶ್ರದ್ಧೆ, ಕಠಿಣ ಪರಿಶ್ರಮ ಮುಂತಾದ ಗುಣಗಳು ಸಹಜವಾಗಿ ಮೈಗೂಡಿದವು.

ನಮ್ಮ ಮುಂದುವರೆದ, ಆಧುನಿಕ ತಾಯ್ತಂದೆಯರು ಮಾತೃ ಭಾಷೆ ತಿರಸ್ಕರಿಸಿ, ಪ್ರಾದೇಶಿಕ ಭಾಷೆಯನ್ನು ಅದೇ ಕಲಿತುಕೊಳ್ಳುವು ದೆಂದು ಭಾವಿಸಿ, ತಮ್ಮ ಮಗುವಿಗೆ ಇಂಗ್ಲಿಷ್ ಕಲಿಸಲು ಪ್ರಯತ್ನಿಸು ವರು. ಧರ್ಮನಿರಪೇಕ್ಷತೆ ಅವರ ಆದರ್ಶವಾದುದರಿಂದ ತಮ್ಮ ಧರ್ಮದ ಆಚರಣೆಯನ್ನು ಬಿಟ್ಟು, ನಾಗರಿಕತೆಯನ್ನು ಕಲಿಸುವರು. ಇಂಗ್ಲಿಷ್ ಅಕ್ಷರ ಕಲಿಯಲು ಮೂರು ವರ್ಷದ ಎಲ್‌ಕೆಜಿ ಮಕ್ಕಳನ್ನು ಟ್ಯೂಷನ್ನಿಗೆ ಸೇರಿಸಿ, ಮನೆಯಲ್ಲೂ ಹಿಂಸೆ ನೀಡಿ ಓದಿಸುವ ತಾಯಂದಿರು ಮಗು ಬೆಳೆದ ಮೇಲೆ ಅವರಲ್ಲಿ ಮೌಲ್ಯಗಳನ್ನು ಅಳವಡಿಸಲು ಸಾಧ್ಯವೆ? ತಾಯ್ತಂದೆಯರಿಗೆ ತಮ್ಮ ಭಾಷೆ, ಸಂಸ್ಕೃತಿಗಳ ಬಗ್ಗೆ ಇರುವ ಕೀಳರಿಮೆ, ಅವರೇ ಮೌಲ್ಯರಹಿತ ಜೀವನ ನಡೆಸುವುದನ್ನು ಕಂಡ ಮಗು, ಬೆಳೆದ ಮೇಲೆ, 'ಪ್ರಪಂಚದ ಎಲ್ಲವನ್ನೂ ನನ್ನ ಹಿಡಿತಕ್ಕೆ ಎಟುಕುವ ಸೂತ್ರಗಳಿಂದ ಕಟ್ಟಿ, ಗೊಂಬೆಯಂತೆ ಕುಣಿಸುತ್ತೇನೆ' ಎಂಬ ಹುಂಬತನದಲ್ಲಿ ವರ್ತಿಸಿ, ತನ್ನ ತಾಯ್ತಂದೆಯರನ್ನು ತಿರಸ್ಕರಿಸಿದರೆ, ಕಾರಣ ಯಾರು?

ಶೈಶವ ಹಾಗೂ ಬಾಲ್ಯದಲ್ಲಿ ನಿರಂತರವಾದ ಹಿಂಸೆ, ಒತ್ತಡ, ಕ್ರೌರ್ಯಗಳಿಗೆ ಒಳಗಾದರೆ, ಸರಿತಪ್ಪುಗಳನ್ನು ನಿರ್ಣಯಿಸಿ ಕೆಲಸ ಮಾಡುವಂತೆ ಅಥವಾ ಸುಮ್ಮನಿರುವಂತೆ ಮಾಡುವ ಮೆದುಳಿನ ಪ್ರಿಫ್ರಾಂಟಲ್ ಕಾರ್ಟೆಕ್ಸ್ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿ, ಅದು ಮಗುವಿನ ನಡವಳಿಕೆಯನ್ನು ಅಸ್ತವ್ಯಸ್ತ ಮಾಡಬಹುದು. ವಿಕೃತ ನಡವಳಿಕೆಯಿಂದ ಮಾತ್ರ ಹುಡುಗನಿಗೆ ಮಾನಸಿಕ ಸಮಸ್ಯೆ ಇರುವುದು ಇತರರಿಗೆ ಗೊತ್ತಾಗುತ್ತದೆ. ಉಳಿದಂತೆ ಎಲ್ಲರಂತೆ ಇರುತ್ತಾನೆ.

ಗ್ರಾಮೀಣ ಪರಿಸರದ ಶಿಕ್ಷಣ, ಮಕ್ಕಳ ಪಾಲನೆಯಲ್ಲಿ ಹೆಸರು ಮಾಡಿದ ಪ್ರೊ. ಜಿ.ಎಸ್. ಜಯದೇವ ಅವರು ಪೃಥ್ವಿ ಎಂಬ ೧೩ ವರ್ಷದ ಹುಡುಗನ ಉದಾಹರಣೆ ನೀಡುತ್ತಾರೆ. ತಂದೆ ತೀರಿದ ಬಳಿಕ ತಾಯಿ ಮರುಮದುವೆ ಆದಾಗ, ಎರಡನೆಯ ಗಂಡ ನಾಲ್ಕು ವರ್ಷದ ಇವನನ್ನು ಹೊಡೆದು ಓಡಿಸಿದ. ಕೆಲವು ದಿನ ಭಿಕ್ಷೆ ಬೇಡುತ್ತಿದ್ದ ಇವನನ್ನು ಸರ್ಕಾರದವರು ವಶಕ್ಕೆ ತೆಗೆದುಕೊಂಡು ಇವರ ಸಂಸ್ಥೆಗೆ ವರ್ಗಾಯಿಸಿದರು. ಮೊದಲು ಸಂವೇದನಾ ರಹಿತ ನಾಗಿದ್ದು, ಮುರುಟಿಕೊಂಡಿದ್ದ ಇವನು ಪ್ರೀತಿ, ಆರೈಕೆಗಳಿಂದ ಚುರುಕಾದ. ಅಪರೂಪಕ್ಕೊಮ್ಮೆ ಅಸ್ವಾಭಾವಿಕವಾಗಿ ಕಳ್ಳತನ ಮಾಡು ತ್ತಿದ್ದ. ಒಮ್ಮೆ ದುಬಾರಿ ಕಾರಿನ ಗಾಜು ಒಡೆದ. 'ಏಕೆ ಒಡೆದೆ' ಎಂದು ಒಂದುಗಂಟೆ ಕಾಲ ಪ್ರಶ್ನಿಸಿದರೂ ಹೇಳದೆ ಇದ್ದಾಗ, ಕಾರಿನ ಒಡೆಯರ ಮನೆಯಲ್ಲೇ ನಿಂತಿರುವ ಶಿಕ್ಷೆ ನೀಡಿದರು. ಕಾರಿನವರು ಪೊಲೀಸಿಗೆ ಕೊಡದೆ, ಇವನನ್ನು ಹೋಗಲಿ ಎಂದು ಬಿಟ್ಟರು. 'ನಮ್ಮ ಕಾರಿನ ಗಾಜನ್ನು ಏಕೆ ಒಡೆದೆ?' ಎಂದು ಅವರು ಕೇಳಿದಾಗ, 'ಕಾರಿನ ಹಿಂದೆ ಪುಟ್ಟ ಆಟದ ಕಾರಿತ್ತು, ಅದಕ್ಕಾಗಿ' ಎಂದ. ಹುಡುಗನನ್ನು ಪರಿಚಿತ ಮನ ಶ್ಶಾಸ್ತ್ರಜ್ಞರಿಗೆ ತೋರಿಸಿದರು. ಅವರು ಕಹಿ ಬಾಲ್ಯದ ಹಿನ್ನೆಲೆಯ ಮಕ್ಕಳು ಇಂತಹ ದುಸ್ಸಾಹಸಗಳನ್ನು ಮಾಡುತ್ತಾರೆ. ಎಷ್ಟೋ ಮಕ್ಕಳು ಕೃತ್ಯಕ್ಕೆ ಕಾರಣವನ್ನು ಸೃಷ್ಟಿಸುತ್ತಾರೆ. ಗಾಜು ಒಡೆಯುವ ದೃಶ್ಯದ ಹುಟ್ಟಿಸುವ ಉದ್ರೇಕವನ್ನು ಆಶಿಸಿರಬಹುದು. ಬೇರೆ ಮಕ್ಕಳಿಗೆ ಇಂತಹ ಕೆಲಸ ಮಾಡದಂತೆ ಮೆದುಳಿನ ಪ್ರಿಫ್ರಾಂಟಲ್ ಕಾರ್ಟೆಕ್ಸ್ ಸಂದೇಶ ನೀಡುತ್ತದೆ. ೧೨-೧೩ ಪ್ರಾಯದಲ್ಲಿ ಈ ಭಾಗ ಪೂರ್ತಿ ಬೆಳೆದಿರದೆ ಇರುವುದು ಸಮಸ್ಯೆಯನ್ನು ದ್ವಿಗುಣ ಗೊಳಿಸುತ್ತದೆ. ಮನಶ್ಶಾಸ್ತ್ರಜ್ಞರು ಶಿಕ್ಷೆಗಿಂತ ಪಶ್ಚಾತ್ತಾಪ ಮೂಡಿಸು ವುದು ಮುಖ್ಯ ಎಂದರು. ಮಾಲಿಕ 'ಕನಿಕರವಿಲ್ಲದ ಅಪರಿಚಿತ ಅನಾಮಧೇಯ ಶ್ರೀಮಂತ' ಎಂದು ಭಾವಿಸುತ್ತ ಹುಡುಗನ ಮನಸ್ಸು ತನ್ನ ಹೀನಕೃತ್ಯವನ್ನು ಮರೆಮಾಚಲು ಪ್ರಯತ್ನಿಸುವುದು ಸ್ವರಕ್ಷಣಾ ವಿಧಾನ. ಆದರೆ ಮಾಲಿಕ ಒಳ್ಳೆಯ ಮನುಷ್ಯ, ತನ್ನಿಂದ ಅವನಿಗೆ ನಷ್ಟವಾಗಿದೆ ಎಂದು ಮನವರಿಕೆ ಮಾಡಿದಾಗ ಮಾತ್ರ ಹುಡುಗ ಪಶ್ಚಾತ್ತಾಪಪಡುವನು. ಬಾಯಿಮಾತಿನ ಪಶ್ಚಾತ್ತಾಪ ನಿಷ್ಪ್ರಯೋಜಕ. ವಾಹನದ ಮಾಲಿಕನ ಮನೆಯಲ್ಲಿ ಕೆಲಸ ಮಾಡಿ ಕೊಟ್ಟು ನಷ್ಟ ಸ್ವಲ್ಪ ಸರಿದೂಗಿಸುವುದು ಸರಿಯಾದ ಶಿಕ್ಷೆ ಎಂದರು. ಹೀಗೆ ಮಾಡಿದರೆ ತನ್ನ ವಿಕೃತ ಸ್ವಭಾವಗಳಿಂದ ತಾನು ಮಾಡಿದ್ದು ಅಷ್ಟೇನೂ ಕೆಟ್ಟದ್ದಲ್ಲ ಎಂಬ, ಅಪರಾಧಿ ಪ್ರಜ್ಞೆಯೇ ಇಲ್ಲದ ಒರಟು ಮನೋಭಾವನೆಯಿಂದ ತನ್ನ ವರ್ತನೆಯನ್ನು ಸಮರ್ಥಿಸಿ, ರೂಢಿಸಿ ಕೊಳ್ಳದಂತೆ ತಡೆಯಬಹುದು. ಶಿಕ್ಷೆಯ ಸ್ವರೂಪ ಕೂಡ ಅರ್ಥ ವತ್ತಾಗಿರಬೇಕು.

ಪೃಥ್ವಿಯ ಎಳೆತನದ ನೆನಪುಗಳಾವುವೂ ಮಾತಿನಲ್ಲಿ ದಾಖಲಾಗಿಲ್ಲ; ತಾಯಿ ತೊರೆದದ್ದು, ಮಲತಂದೆ ಹೊಡೆದು ಓಡಿಸಿದ್ದು, ಹಸಿವಿನ ಅಭದ್ರತೆಯಲ್ಲಿ ನರಳಿದ್ದು ಇವು ಯಾವುವೂ ನೆನಪಿಲ್ಲ. ಆದರೆ ಆ ಕಹಿಗಳೆಲ್ಲ ಹರಳುಗಟ್ಟಿ, ಮನದ ಆಳದಲ್ಲಿ ಸ್ನಿಗ್ಧವಾದ ನೋವಿನ ಗಂಟುಗಳಾಗಿ ಉಳಿದುಬಿಟ್ಟಿತ್ತು. ಇಂತಹ ಕಹಿಗಳು ಜೀವನದುದ್ದಕ್ಕೂ ವಿಕೃತ ನಡವಳಿಕೆಗಳನ್ನು ಪ್ರಚೋದಿಸುತ್ತಲೇ ಇರುತ್ತವೆ. ಇದನ್ನು ಅರಿತರೆ ಮಕ್ಕಳ ಶೈಶವ, ಬಾಲ್ಯಗಳನ್ನು ಹೇಗೆ ಗೌರವಿಸಬೇಕೆಂದು ಅರ್ಥವಾಗುತ್ತದೆ. ಸಿಹಿ ಬಾಲ್ಯ ದೊರೆತರೆ ಸಮಸ್ಯಾಸಾಗರವೇ ಪರಿಹಾರವಾದಂತೆ.

ಸುಪ್ತಪ್ರಜ್ಞೆ ನಮ್ಮ ವರ್ತನೆಯನ್ನು ನಿರ್ದೇಶಿಸುತ್ತದೆ, ಬುದ್ಧಿಯಲ್ಲ. ಸುಪ್ತಪ್ರಜ್ಞೆಗೆ ಅರ್ಥವಾಗುವುದು ನಮ್ಮ ತರ್ಕವಲ್ಲ, ಭಾವನೆ ಗಳು. ಭಾವನೆಗಳನ್ನು ಸಾಮಾಜಿಕವಾಗಿ ನಿರ್ವಹಿಸುವ ಕಲೆ ನಮ್ಮ ಸಾಂಪ್ರದಾಯಿಕ ಆಚರಣೆಗಳಿಗೆ ಇವೆ. ಬಾಲ್ಯದಿಂದಲೇ ನಮ್ಮ ಮಕ್ಕಳನ್ನು ಇಂತಹ ಸಾಂಪ್ರದಾಯಿಕ ಆಚರಣೆಗಳಲ್ಲಿ ಭಾಗ ವಹಿಸುವಂತೆ ಮಾಡಿದರೆ ಅವರ ನೈತಿಕ ಜೀವನವನ್ನು ರೂಪಿಸಿ ದಂತೆಯೆ. ಬರಿಯ ಬುದ್ಧಿವಾದಗಳಿಂದ ಭಾವಲೋಕವನ್ನು ನಿರ್ಮಿಸುವುದು ಅಸಾಧ್ಯ.